೪) ಉಳ್ಳಾಲ ಕ್ಷೇತ್ರದಲ್ಲಿ ವಿದ್ಯುತ್ ನಿಲುಗಡೆಯಂ ತೊಂದರೆಯನ್ನು ನಿವಾರಿಸುಂ ಕೊಣಾಜೆ ಸಬ್‌ಸ್ಟೇಷನ್‌ಗೆ ಸಿಬ್ಬಂದಿಯನ್ನು ನೇಮಿಸುವುದು.

ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ಉಳ್ಳಾಲ ಕ್ಷೇತ್ರದಲ್ಲಿ ಆಗಾಗ ವಿದ್ಯುತ್ ನಿಲುಗಡೆಯಾಗುತ್ತಿದೆ. ರಾತ್ರಿ ಸಮಯದಲ್ಲಿ ಆಗಾಗ ವಿದ್ಯುತ್ ನಿಂತು ಹೋಗುತ್ತದೆ. ಈ ವಿದ್ಯುತ್ ಕಣ್ಣು ಮುಚ್ಚಾಲೆಯಿಂದ ಗ್ರಾಹಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇದಕ್ಕೆ ಅಧಿಕಾರಿಗಳು ಹೇಳುವ ಕಾರಣ ಕೊಣಾಜೆಯಲ್ಲಿ ಒಂದು ಸಬ್ ಸ್ಟೇಷನ್ ಮಾಡಿ ಮೂರು ವರುಷವಾಯಿತು. ಅಲ್ಲಿಗೆ ಒಬ್ಬ ಸಿಬ್ಬಂದಿಯ ನೇಮಕವೂ ಆಗಿಲ್ಲ. ಸಿಬ್ಬಂದಿಯ ನೇಮಕಕ್ಕೆ ಮೂರು ವರ್ಷಗಳಿಂದ ಕೇಳುತ್ತಾ ಬಂದಿದ್ದರೂ ಇನ್ನೂ ನೇಮಕವಾಗಿಲ್ಲ. ಆದಕಾರಣ ಕೊಣಾಜೆ ಸಬ್ ಸ್ಟೇಷನ್‌ಗೆ ಒಬ್ಬ ಸಿಬ್ಬಂದಿಯ ನೇಮಕವನ್ನು ತಕ್ಷಣ ಮಾಡಬೇಕು. ಸಿಬ್ಬಂದಿಯ ನೇಮಕ ಮಾಡಿ ಉಳ್ಳಾಲ ಕ್ಷೇತ್ರದ ವಿದ್ಯುತ್ ನಿಲುಗಡೆಯಂ ತೊಂದರೆಯನ್ನು ನಿವಾರಿಸಬೇಕು. ಈ ಕುರಿತು ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೇ,

ಮಂಗಳೂರು ತಾಲ್ಲೂಕಿನ ಉಳ್ಳಾಲ ಪ್ರದೇಶವು, ಈಗ ಕೊಣಾಜೆಯಲ್ಲಿ ಸ್ಥಾಪಿಸಿರುವ ಸಿಬ್ಬಂದಿ ರಹಿತ ೧೦×೩ ಎಂ.ವಿ.ಎ. ಸಬ್-ಸ್ಟೇಷನ್ನಿನಿಂದ ವಿದ್ಯುತ್ ಸರಬರಾಜು ಪಡೆಯುತ್ತಿದ್ದು, ಈ ವಿತರಣಾ ಕೇಂದ್ರವು ಸಿಬ್ಬಂದಿ ರಹಿತವಾಗಿರುವುದರಿಂದ, ರಾತ್ರಿ ವೇಳೆಯಲ್ಲಿ ವಿದ್ಯುತ್ ಲೈನ್ ದೋಷದಿಂದ ವಿದ್ಯುತ್ ನಿಲುಗಡೆಯಾದಲ್ಲಿ, ಅದನ್ನು ಸರಿಪಡಿಸಲು ಉಳ್ಳಾಲದಲ್ಲಿರುವ ಶಾಖಾಧಿಕಾರಿಯವರು ಕೊಣಾಜೆಗೆ ಬಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಈ ವೇಳೆಯಲ್ಲಿ ಕೊಣಾಜೆಯಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳಿಗೆ ವಿದ್ಯುತ್ ಅಡಚಣೆ ಉಂಟಾಗುವುದು ಸಹಜ ಮತ್ತು ಸರಿಪಡಿಸಲು ಸಮಯಬೇಕಾಗುವುದು.

ಇದೇ ರೀತಿಯ ಸಿಬ್ಬಂದಿ ರಹಿತ ವಿತರಣಾ ಕೇಂದ್ರಗಳನ್ನು, ರಾಜ್ಯದ ಇನ್ನೂ ಅನೇಕ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಮಂಡಳಿಯ ಸದ್ಯದ ಆರ್ಥಿಕ ಮುಗ್ಗಟ್ಟಿನಿಂದ ಈ ಎಲ್ಲಾ ವಿತರಣಾ ಕೇಂದ್ರಗಳನ್ನು, ಎಲ್ಲಾ ಕಾಲಗಳಲ್ಲೂ ನೋಡಿಕೊಳ್ಳಲು ಸಿಬ್ಬಂದಿ ನೇಮಕಾತಿಯನ್ನು ಮಾಡಲಾಗಲಿಲ್ಲ. ಮಂಡಳಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಹಂತ ಹಂತವಾಗಿ ಎಲ್ಲಾ ಸಿಬ್ಬಂದಿ ರಹಿತ ವಿತರಣಾ ಕೇಂದ್ರಗಳಿಗೆ ಸಿಬ್ಬಂದಿ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಆ ಸಮಯದಲ್ಲಿ ಕೊಣಾಜೆ ವಿತರಣಾ ಕೇಂದ್ರಕ್ಕೂ ಸಿಬ್ಬಂದಿಯನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

೫) ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ವಾಪ್‌ಗ್ಯಾಪ್ ನೆಲೆಯಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರುಗಳ ಸೇವೆಯನ್ನು ಖಾಯಂಗೊಳಿಸುವುದು,

ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ).—ಕರ್ನಾಟಕದ ಹೆಚ್ಚಿನ ಎಲ್ಲಾ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ವಾಪ್‌ಗ್ಯಾಪ್ ನೆಲೆಯಲ್ಲಿ ಸಂಬಂಧಿತ ಆಡಳಿತ ವರ್ಗದವರು ಹಲವಾರು ಉಪನ್ಯಾಸಕರನ್ನು ನೇಮಕ ಮಾಡಿರುತ್ತಾರೆ. ಇದಂ ಕೇವಲ ತಾತ್ಕಾಲಿಕ ವ್ಯವಸ್ಥೆ. ಇಂತಹ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಗೊಳಿಸಬೇಕೆಂದು ಕಾಲೇಜು ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರುಗಳು ವಿದ್ಯಾ ಇಲಾಖೆಯ ಸಂಬಂಧಿತ ಅಧಿಕಾರಿಗಳಿಗೆ ಹಾಗೂ ಸರ್ಕಾರಕ್ಕೆ ಮನವಿ ಮಾಡಿದ್ದರೂ ಏನೊಂದೂ ಪ್ರಯೋಜನವಾಗಿಲ್ಲ. ಸುಮಾರು ೭-೮ ವರ್ಷಗಳಿಂದ ದುಡಿಯುತ್ತಿರುವುದು ಮಾತ್ರವಲ್ಲದೆ ಅವರಿಗೆ ಏಜ್‌ಬಾರ್ ಆಗಲಿರುವುದರಿಂದ ಮತ್ತು ವಿಪರಿತ ನಿಯೆಮಗಳಿಂದಾಗಿ ಇಂತಹ ಉಪನ್ಯಾಸಕರು ತುಂಬಾ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ ಮಾನವೀಯತೆ ದೃಷ್ಟಿಯಿಂದ ಸದರಿ ಉಪನ್ಯಾಸಕರುಗಳನ್ನು ಖಾಯಂಗೊಳಿಸುವಂತೆ ಕ್ರಮ ತೆಗೆದುಕೊಳ್ಳಬೇಕಾಗಿ ಮಾನ್ಯ ವಿದ್ಯಾ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮತ್ತು ಆಹಾರ ಖಾತೆ ರಾಜ್ಯ ಸಚಿವರು) (ಮಾನ್ಯ ವಿದ್ಯಾ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ ಮಾನ್ಯ ವಿದ್ಯಾ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ. ಕಾಲೇಜು ಶಿಕ್ಷಣ ಇಲಾಖೆಯ ಖಾಸಗಿ ಅನುದಾನಿತ

ಪದವಿ ಕಾಲೇಜುಗಳಲ್ಲಿ ಸ್ವಾಪ್‌ಗ್ಯಾಪ್ ಆಧಾರದ ಮೇಲೆ ಉಪನ್ಯಾಸಕರನು ನೇಮಕ ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಅವರಿಗೆ ತಿಂಗಳಿಗೆ ರೂ. ೧೦೪೦ರಂತೆ ಕ್ರೋಢೀಕೃತ ವೇತನವನ್ನು ನೀಡಲಾಗುತ್ತಿದೆ. ಅವರ ನೇಮಕಾತಿ ಮೂರು ತಿಂಗಳಿಗೆ ಮಾತ್ರ ಸೀಮಿತವಾಗಿದ್ದು ಸದರಿ ಅವಧಿಯ ನಂತರ ಒಂದು ದಿನದ ಸೇವಾಭಂಗ ಮಾಡಿ ಅವರನ್ನು ಶೈಕ್ಷಣಿಕ ವರ್ಷದ ಅಂತ್ಯದ ವರೆಗೆ ಮುಂದುವರಿಸಬಹುದಾಗಿರುತ್ತದೆ. ೧೯೮೯-೯೦ನೇ ಸಾಲಿನಲ್ಲಿ ೬೮೩ ಸ್ವಾಪ್‌ಗ್ಯಾಪ್ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಯಿತು. ಈ ಸ್ವಾಪ್‌ಗ್ಯಾಪ್ ಉಪನ್ಯಾಸಕರು ಪಡೆಯುತ್ತಿರುವ ಕ್ರೋಢೀಕೃತ ವೇತನವನ್ನು ೧೦೪೦ ರೂಪಾಯಿಯಿಂದ ೧೬೯೦ ರೂಪಾಯಿಗಳಿಗೆ ಹೆಚ್ಚಿಸ ಬೇಕೆಂಬ ಬೇಡಿಕೆಯು ಸರ್ಕಾರದ ಪರಿಶೀಲನೆಯಲ್ಲಿದ್ದಾಗ ೩೮೩ ಸ್ವಾಪ್‌ಗ್ಯಾಪ್ ಉಪನ್ಯಾಸಕರು ಕೆಳಗಿನ ಬೇಡಿಕೆಗಳೊಂದಿಗೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

೧. ಸಕ್ರಮವಾಗಿ ನೇಮಕ ಹೊಂದಿದ ಉಪನ್ಯಾಸಕರ ವೇತನ ಶ್ರೇಣಿಯಾದ ೧೬೯೦ ರೂಪಾಯಿಗಳಿಂದ ೩೬೨೦ ರೂಪಾಯಿಗಳಿಗೆ ಇವರ ವೇತನವನ್ನು ವಿಸ್ತರಿಸುವುದು.

೨. ಇವರನ್ನು ಶಾಶ್ವತವಾದ ನೌಕರರು ಎಂದು ಪರಿಗಣಿಸಿ ಅದರ ಪರಿಣಾಮವಾಗಿ ನೀಡ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.

ಅವರನ್ನು ಸೇವೆಯಿಂದ ತೆಗೆದುಹಾಕದೇ ಇರುವಂತೆ ಎಲ್ಲಾ ೩೮೩ ಪ್ರಕರಣಗಳಲ್ಲೂ ನ್ಯಾಯಾಲಯವು ತಡೆಯಾಜ್ಞೆ ಆದೇಶ ನೀಡಿದೆ. ಅವರ ನೇಮಕಾತಿಯನ್ನು ಯಾವುದೇ ನೇಮಕಾತಿ ಪದ್ಧತಿಯನ್ವಯ ಮಾಡಿರುವುದಿಲ್ಲವಾದ್ದರಿಂದ ಅವರ ಸೇವೆಯನ್ನು ಸಕ್ರಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಅವರ ಬೇಡಿಕೆಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದು ಆ ಬಗ್ಗೆ ಸದರಿ ನ್ಯಾಯಾಲಯವು ನೀಡುವ ತೀರ್ಪಿನ ಆಧಾರದ ಮೇಲೆ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ.

೬. ತುಮಕೂರು ಜಿಲ್ಲೆಯ ಮಧುಗಿರಿಯ ಡಾ : ಜಗನ್ನಾಥ ಅವರಿಗೆ ಎಂ. ಡಿ. ಸೀಟನ್ನು ದೊರಕಿಸುವಂತೆ ಕೋರಿಕೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಮಧುಗಿರಿಯ ಡಾ : ಜಗನ್ನಾಥ ೧೯೮೯ರ ಅಕ್ಟೋಬರ್‌ನಲ್ಲಿ ಎಂ. ಡಿ. ಎಂ. ಎಸ್. ಸ್ನಾತಕ ಪದವಿ ಶಿಕ್ಷಣದ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದರು. ಪ್ರವೇಶ ಪರೀಕ್ಷೆಗಳ ಫಲಿತಾಂಶ ಪ್ರಕಟವಾದಾಗ 'ಬಿ' ಗುಂಪಿನಲ್ಲಿ ಎಂ. ಡಿ. ಎಂ. ಎಸ್. ಗೆ ಅರ್ಜಿ ಸಲ್ಲಿಸಿದವರ ಪೈಕಿ ಜಗನ್ನಾಥ ನಾಲ್ಕನೇ ಸ್ಥಾನದಲ್ಲಿದ್ದರು. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಎಂ. ಡಿ. ಮತ್ತು ಎಂ. ಎಸ್. ನಲ್ಲಿ 'ಬಿ' ಗುಂಪಿಗೆ ತಲಾ ಮೂರು ಸೀಟುಗಳನ್ನು ಮಾತ್ರ ಕಾದಿರಿಸಿತ್ತು. ಜಗನ್ನಾಥ್ ಅವರು ನಾಲ್ಕನೆಯ ಸ್ಥಾನದಲ್ಲಿ ಇದ್ದುದರಿಂದ ಅವರಿಗೆ ಎಂ. ಎಸ್. ಸೀಟು ದೊರಕಿತು: ಎಂ. ಡಿ. ಓದಬೇಕೆಂಬ ಇಚ್ಛೆಯಿದ್ದರೂ ಅರ್ಜಿಯಲ್ಲಿ ಅದನ್ನು ಸೂಚಿಸಿದ್ದರೂ ಮೂರು ಸೀಟು ಮಾತ್ರ ಕಾದಿರಿಸಿದ್ದರಿಂದ ಎಂ. ಡಿ. ಸೀಟು ಇವರಿಗೆ ಸಿಗಲಿಲ್ಲ. ಆದರೆ 'ಬಿ' ಗುಂಪಿನಲ್ಲಿ ಮೂರನೆಯ ಸ್ಥಾನ ಪಡೆದು ಎಂ.ಡಿ. ಸೀಟು ದೊರಕಿಸಿಕೊಂಡ ವಿದ್ಯಾರ್ಥಿ 'ಸುಳ್ಳು ಜಾತಿ ಪತ್ರ ನೀಡಿ' ಸೀಟು ಪಡೆದುಕೊಂಡಿರುವುದನ್ನು ಜಗನ್ನಾಥರವರೇ ಬೆಳಕಿಗೆ ತಂದು ತನಗೆ ಅವಕಾಶ ಮಾಡಿಕೊಳ್ಳಲು ವಿನಂತಿಸಿದ್ದರು. ಅದನ್ನು ರದ್ದು ಮಾಡಿದ ಶಿಕ್ಷಣ ನಿರ್ದೇಶನಾಲಯ ಜಗನ್ನಾಥರಿಗೆ ಅವಕಾಶ ಮಾಡಿಕೊಡುವುದರ ಬದಲು 'ಬಿ' ಗುಂಪಿನಲ್ಲಿ ಎನೇ ಸ್ಥಾನದಲ್ಲಿರುವವನಿಗೆ ಕಾನೂನು ಬಾಹಿರವಾಗಿ ಕೊಟ್ಟಿರುವುದನ್ನು ತಪ್ಪಿಸಿ ಶ್ರೀ ಜಗನ್ನಾಥರವರಿಗೆ ಅವಕಾಶ ಮಾಡಿಕೊಡುವಂತೆ ಕೋರುತ್ತೇನೆ. ಇದರ ಬಗ್ಗೆ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿತ್ತು. ಆದ್ದರಿಂದ ಇವರಿಗೆ ಮುಖ್ಯಮಂತ್ರಿಗಳು ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಎತ್ತಿರುವ ಸೂಚನೆ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ತುಮಂಕೂರು ಜಿಲ್ಲೆ ಮಧುಗಿರಿಯ ಡಾಕ್ಟರ್ ಜಗನ್ನಾಥರವರು ೧೯೮೯ರ ಅಕ್ಟೋಬರ್ ತಿಂಗಳಿನಲ್ಲಿ ವೈದ್ಯಕೀಯ ಶಿಕ್ಷಣ ಸ್ನಾತಕೋತ್ತರ ತರಬೇತಿಗೆ ಆಯ್ಕೆ ಮಾಡಲು ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ ಗ್ರೂಪ್ "ಬಿ" ನಲ್ಲಿ ೨೫೦ನೇ ಸ್ಥಾನ ಗಳಿಸಿದ್ದರು. ಈ ಗುಂಪಿನಲ್ಲಿ ೧೪೦ನೇ ಸ್ಥಾನ ಗಳಿಸಿದ ಡಾಕ್ಟರ್ ವೆಂಕಟರಮಣ ಇವರನ್ನು ಎಮ್ಮೆ.ಡಿ. (ಜನರಲ್ ಮೆಡಿಸಿನ್)ಗೆ ಆಯ್ಕೆ ಮಾಡಲಾಗಿದ್ದಿತು.